R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

ಭಾಗ– IV Part– IV	ಬೆಂಗಳೂರು, ಸೋಮವಾರ, 27, ಏಪ್ರಿಲ್, 2020 (ವೈಶಾಖ 07, ಶಕವರ್ಷ 1942) Bengaluru, MONDAY, 27, APRIL, 2020 (Vaishakha 07, ShakaVarsha 1942)	ನಂ. 152 No. 152

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 08 ಶಾಸನ 2020, ಬೆಂಗಳೂರು, ದಿನಾಂಕ: 27.04.2020

ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2020ಕ್ಕೆ ಏಪ್ರಿಲ್ ತಿಂಗಳ 24ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 09 ಎಂಬುದಾಗಿ ಕರ್ನಾಟಕರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

KARNATAKA ACT NO. 09 OF 2020

(First Published in the Karnataka Gazette Extra-ordinary on the 27thday of April, 2020)

THE KARNATAKA LAND REFORMS (AMENDMENT) ACT, 2020

(Received the assent of Governor on the 24thday of April, 2020)

An Act further to amend the Karnataka Land Reforms Act, 1961.

Whereas it is expedient to amend the Karnataka Land Reforms Act, 1961 (Karnataka Act 10 of 1962), for the purposes hereinafter appearing;

Be it enacted by the Karnataka State Legislature in the Seventy first year of the Republic of India, as follows:-

1. Short title and commencement.-(1) This Actmay be called the Karnataka Land Reforms (Amendment) Act, 2020.

(2) It shall be deemed to have come into force with effect from 20th November 2019.

2. Amendment of section 109.- In the Karnataka Land Reforms Act, 1961 (Karnataka Act 10 of 1962), (hereinafter referred to as principal Act) in section 109,-

(1) in sub-section(1), for clause (i), the following shall be substituted, namely:-

"(i) industrial development, the extent of which shall not exceed forty units;

Explanation.-Industrial development" includes mining of minor minerals, whether specified or non-specified and stone crushing activity under the Karnataka Regulation of Stone Crushers Act, 2011 (Karnataka Act 8 of 2012)

Provided that in respect of Industrial development,such Land to such extent approved by the Government with approval of the State High level clearance committee or the State level single window clearance committee constituted under the Karnataka Industries (facilitation) Act, 2002 (Karnataka Act 45 of 2003) shall be deemed to haveexempted by the Government from the provisions of section 63, 79A, 79B or 80."

(2) In sub-section (2), for the proviso, the following shall be substituted, namely:-

"Provided that, any company or organization after obtaining permission under sub-section (1), purchases the land and if such company or organization after utilizing the land for not less than seven years for the purpose of purchase, does not continue to use the land due to various reasons which are beyond its control, after seven years so permitted under rules from the date of such purchase, may on an application be permitted, by the Government, for sale of the land for the same purpose."

3. Repeal and savings.-(1)The Karnataka Land Reforms (Amendment) Ordinance, 2019(Karnataka Ordinance 3 of 2019) is hereby repealed.

(2) Notwithstanding such repeal anything done or any action taken under the principal Act, as amended by the said Ordinance, shall be deemed to have been done or taken under principal Act, as amended by this Act.

By Order and in the name of
the Governor of Karnataka,

(K.DWARAKANATH BABU)
Secretary to Government
Department of Parliamentary Affairs and
Legislation

PARLIAMENTARY AFFAIRS AND LEGISLAITON SECRETARIAT

NOTIFICATION

No. DPAL 08 SHASANA 2020, Bengaluru, dated: 27.04.2020

Ordered that the translation of the Karnataka Land Reforms (Amendment) Act, 2020(Karnataka Act : 09 of 2020) in the Kannada language, be published as authorised by the Governor of Karnataka under section 5-A of the Karnataka Official Language Act, 1963 in the Karnataka Gazette for general information.

The following translation ofthe Karnataka Land Reforms (Amendment) Act, 2020(Karnataka Act :09 of 2020) in the Kannada language is published in the Official Gazette under the authority of the Governor of Karnataka under section 5-A of the Karnataka Official Language Act, 1963

2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 9

(2020ರ ಏಪ್ರಿಲ್ ತಿಂಗಳ27ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2020

(2020ರಏಪ್ರಿಲ್ ತಿಂಗಳ24ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನುಪಡೆಯಲಾಗಿದೆ)

ಕರ್ನಾಟಕ ಭೂಸುಧಾರಣೆಗಳ ವಿಧೇಯಕ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಭೂಸುಧಾರಣೆಗಳ ಅಧಿನಿಯಮ, 1961ನ್ನು (1962ರಕರ್ನಾಟಕ ಅಧಿನಿಯಮ 10) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು 2019ರ ನವೆಂಬರ್ 20 ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 109ನೇ ಪ್ರಕರಣದ ತಿದ್ದುಪಡಿ.-ಕರ್ನಾಟಕ ಭೂಸುಧಾರಣೆಗಳ ಅಧಿನಿಯಮ, 1961ರಲ್ಲಿ (1962ರ ಕರ್ನಾಟಕ ಅಧಿನಿಯಮ 10) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 109ನೇ ಪ್ರಕರಣದಲ್ಲಿ,-

(1) (1)ನೇ ಉಪಪ್ರಕರಣದ (i)ನೇಖಂಡಕ್ಕೆಈಮುಂದಿನದನ್ನುಪ್ರತಿಯೋಜಿಸತಕ್ಕದ್ದು, ಎಂದರೆ:-

"(i) ನಲವತ್ತು ಘಟಕಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ ಭೂಮಿಯನ್ನು ಕೈಗಾರಿಕಾ ಅಭಿವೃದ್ಧಿಗಾಗಿ;

ವಿವರಣೆ.- "ಕೈಗಾರಿಕಾ ಅಭಿವೃದ್ಧಿ" ಯು ಸಣ್ಣ ಖನಿಜಗಳ ಗಣಿಗಾರಿಕೆ, ಅದನ್ನು ನಿರ್ದಿಷ್ಟಪಡಿಸಿರಲಿ ಅಥವಾ ನಿರ್ದಿಷ್ಟಪಡಿಸದಿರಲಿ ಮತ್ತು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011ರ (2012ರಕರ್ನಾಟಕ ಅಧಿನಿಯಮ 8) ಅಡಿಯಲ್ಲಿನ ಕಲ್ಲುಪುಡಿ ಮಾಡುವ ಚಟುವಟಿಕೆಯನ್ನು ಒಳಗೊಳ್ಳುತ್ತದೆ.

ಪರಂತು, ಕೈಗಾರಿಕಾ ಅಭಿವೃದ್ಧಿಯ ಸಂಬಂಧದಲ್ಲಿ, ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ರ (2003ರ ಕರ್ನಾಟಕ ಅಧಿನಿಯಮ 45) ಅಡಿಯಲ್ಲಿ ರಚಿಸಲಾದ ರಾಜ್ಯ ಉನ್ನತಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಅಥವಾ ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯ ಅನುಮೋದನೆಯೊಂದಿಗೆ ಸರ್ಕಾರವು ಅನುಮೋದಿಸಿದ ಅಂಥ ಭೂಮಿಯನ್ನು ಅಂಥ ವ್ಯಾಪ್ತಿಯವರೆಗೆ, 63, 79ಎ, 79ಬಿಅಥವಾ 80ನೇ ಪ್ರಕರಣಗಳ ಉಪಬಂಧಗಳಿಂದ ಸರ್ಕಾರವು ವಿನಾಯಿತಿಸಿದೆ ಎಂಬುದಾಗಿ ಭಾವಿಸತಕ್ಕದ್ದು."

(2) (2)ನೇ ಉಪ ಪ್ರಕರಣದ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು (1)ನೇ ಉಪಪ್ರಕರಣದ ಅಡಿಯಲ್ಲಿ ಅನುಮತಿಯನ್ನು ಪಡೆದ ತರುವಾಯ ಯಾವುದೇ ಕಂಪನಿ ಅಥವಾ ಸಂಸ್ಥೆಯು ಭೂಮಿಯನ್ನು ಖರೀದಿಸಿ ಮತ್ತು ಖರೀದಿಯ ಉದ್ದೇಶಕ್ಕಾಗಿ ಏಳು ವರ್ಷಗಳಿಗೆ ಕಡಿಮೆಯಲ್ಲದಂತೆ ಭೂಮಿಯನ್ನು ಬಳಸಿದ ತರುವಾಯ, ಅಂಥ ಕಂಪನಿ ಅಥವಾ ಸಂಸ್ಥೆಯು ಅದರ ಹತೋಟಿಯಲ್ಲಿರದ ಹಲವಾರು ಕಾರಣಗಳಿಗಾಗಿ ಭೂಮಿಯ ಬಳಕೆಯನ್ನು ಮುಂದುವರೆಸದೇ ಇದ್ದಲ್ಲಿ, ನಿಯಮಗಳ ಅಡಿಯಲ್ಲಿ ಹಾಗೆ ಅನುಮತಿಸಿದ ಅಂಥ ಖರೀದಿಯ

ದಿನಾಂಕದಿಂದ ಏಳುವರ್ಷಗಳ ತರುವಾಯ, ಅರ್ಜಿಯನ್ನು ಸಲ್ಲಿಸಿ, ಸರ್ಕಾರವು ಅನುಮತಿಸಿದ ಮೇರೆಗೆ ಅದೇ ಉದ್ದೇಶಕ್ಕಾಗಿ ಭೂಮಿಯನ್ನು ಮಾರಾಟ ಮಾಡಬಹುದು.''

3. ನಿರಸನ ಮತ್ತು ಉಳಿಸುವಿಕೆಗಳು.- (1) ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ಅಧ್ಯಾದೇಶ, 2019ನ್ನು (2019ರ ಕರ್ನಾಟಕ ಅಧ್ಯಾದೇಶ 3) ಈ ಮೂಲಕ ನಿರಸನಗೊಳಿಸಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಗೊಳಿಸಿದಂತೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

The above translation of the Karnataka Land Reforms (Amendment) Act, 2020 (Karnataka Act 9 of 2020)shallbe authoritative text in the Kannada language under section 5-A of the Karnataka Official Language Act, 1963 (Karnataka Act 26 of 1963).

ವಜುಬಾಯಿ ವಾಲ
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE